**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 980/2022**

ಸರ್ಕಾರದ ಪರ
ಕುಂದಾಪುರ ಪೋಲಿಸ್ ಠಾಣೆ. --- ಫಿರ್ಯಾದಿದಾರರು

-ಮತ್ತು-

1. ಅಬ್ದುಲ್ ಸತ್ತಾರ್ ಹಾಗೂ ಇನ್ನೊಬ್ಬರು --- ಆರೋಪಿತರು

**ಃಆಪಾದನೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ**

1. ಅಬ್ದುಲ್ ಸತ್ತಾರ್, 28 ವರ್ಷ
ತಂದೆಃ ಹಳವಳ್ಳಿ ಹಸೈನಾರ್ ಬ್ಯಾರಿ,
ವಾಸಃ ರುಕಿಯ್ಯ ಮಂಜಿಲ್,
ಗಣೇಶ ನಗರ, ವಾಕ್ವಾಡಿ ರೋಡ್,
ಕುಂಭಾಶಿ ಗ್ರಾಮ, ಕುಂದಾಪುರ ತಾಲೂಕು.

2. ಅಬ್ದುಲ್ ಅಜೀಜ್, 28 ವರ್ಷ
ತಂದೆಃ ಹಳವಳ್ಳಿ ಹಸೈನಾರ್ ಬ್ಯಾರಿ,
ವಾಸಃ ರುಕಿಯ್ಯ ಮಂಜಿಲ್,
ಗಣೇಶ ನಗರ, ವಾಕ್ವಾಡಿ ರೋಡ್,
ಕುಂಭಾಶಿ ಗ್ರಾಮ, ಕುಂದಾಪುರ ತಾಲೂಕು.

ಕುಂದಾಪುರ ತಾಲೂಕು, ಕೋಣಿ ಗ್ರಾಮದ ಅಣ್ಣಮ್ಮ ಕಲ್ಲು ರಸ್ತೆಯಲ್ಲಿರುವ ಬ್ಯಾರಿ ಬ್ರದರ್ಸ್ ಹೋಲೋ ಬ್ಲಾಕ್ ಕಟ್ಟಡದ ಪೂರ್ವ ಬದಿಯ ಶೆಡ್ ನಲ್ಲಿ ಅಕ್ರಮವಾಗಿ ಯಾವುದೆ ಪರವಾನಗಿ ಇಲ್ಲದೇ ಕಾನೂನು ಪಡಿತರ ಅಕ್ಕಿಯನ್ನು ದಾಸ್ತಾನು ಮಾಡಿಕೊಂಡಿದ್ದನುನ ಚಾ.ಸಾ.1 ನೇಯವರಾದ ಕುಂದುರ ತಾಲೂಕು ಆಹಾರ ನಿರೀಕ್ಷಕರು ದಿ. 27.08.2020 ರಂದು ಮಧ್ಯಾಹ್ನ 4.45 ಗಂಟೆಗೆ ಸದ್ರಿ ಸ್ಥಳಕ್ಕೆ ಪೋಲಿಸರೊಂದಿಗೆ ದಾಳಿ ಮಾಡಿದಾಗ ಆರೋಪಿ 1 ಮತ್ತು 2 ನೇಯವರನ್ನು ವಶಕ್ಕೆ ಪಡೆದುಕೊಂಡು ವಿಚಾರಿಸಲಾಗಿ ಅವರುಗಳು ಸದ್ರಿ ಅಕ್ಕಿಯನ್ನು ನಾವುಗಳು ಹಳ್ಳಿಹಳ್ಳಿಗಳಿಂದ ಜನರಿಗೆ ಸರಕಾರದಿಂದ ಉಚಿತ ಅನ್ನಭಾಗ್ಯದ ಯೋಜನೆಯಡಿ ಸಿಗುವ ಪಡಿತರ ಅಕ್ಕಿಯನ್ನು ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿ ದಾಸ್ತಾನು ಮಾಡಿ ಅಕ್ಕಿಯನ್ನು 50 ಕೆ.ಜಿ. ಯಂತೆ ಪಾಲಿಥಿನ್ ಚೀಲದಲ್ಲಿ ತುಂಬಿಸಿ ಮಾರಾಟ ಮಾಡಲು ಇಟ್ಟಿರುವುದಾಗಿ ತಿಳಿಸಿರುತ್ತಾರೆ. ಶೆಡ್ ನಲ್ಲಿದ್ದ ಅಕ್ಕಿ ತುಂಬಿದ ಪಾಲಿಥಿನ್ ಚೀಲಗಳನ್ನು ಪರಿಶೀಲಿಸಲಾಗಿ ಸುಮಾರು 414 ಅಕ್ಕಿ ತುಂಬಿದ ಚೀಲವಿದ್ದು ಪ್ರತಿಯೊಂದು ಚೀಲವು 50 ಕೆ.ಜಿ. ತೂಕವಿದ್ದು ಒಟ್ಟು 20,700 ಕೆ.ಜಿ. ಇರುತ್ತದೆ. ಮತ್ತು ಶೆಡ್‌ನ ಒಳಗೆ ಬಿಳಿ ಮತ್ತು ನೀಲಿ ಚೀಲದಲ್ಲಿ ಅಕ್ಕಿ ತುಂಬಿಸಿ ರಾಶಿ ಹಾಕಿರುವುದು ಕಂಡು ಬಂದಿದ್ದು ಅದನ್ನು ಪರಿಶೀಲಿಸಿಲಾಗಿ ಸುಮಾರು 40 ಚೀಲವಿದ್ದು ತಲಾ 40 ಕೆ.ಜಿ. ಯಂತೆ ಅಕ್ಕಿ ಇದ್ದು ಒಟ್ಟು 1600 ಕೆ.ಜಿ. ಇರುತ್ತದೆ. ಹಾಗೂ ದಾಸ್ತಾನು ಮಾಡಿದ ಅಕ್ಕಿಯನ್ನು ಸಾಗಾಟ ಮಾಡಲು ಶೇಡ್ ನ ಎದುರುಗಡೆ ನಿಲ್ಲಿಸಿದ್ದ ಲಾರಿಯಲ್ಲಿ 60 ಪಾಲಿಥಿನ್ ಚೀಲದಲಿಲ ತಲಾ 50 ಕೆ.ಜಿ. ಅಕ್ಕಿ ತುಂಬಿಸಿರುವುದು ಕಂಡುಬಂದಿದ್ದು ಇದರಲ್ಲಿ 3,000 ಕೆ.ಜಿ. ಅಕ್ಕಿ ಇರುತ್ತದೆ. ಒಟ್ಟು 25,300 ಕೆ.ಜಿ. ಅಕ್ಕಿ ದೊರೆತಿದ್ದು ಅವುಗಳ ಅಂದಾಜು ಮೌಲ್ಯ 3,79,500 ರೂಪಾಯಿ ಆಗಬಹುದು. ಸದ್ರಿ ಅಕ್ಕಿಯನ್ನು ಸಾಗಾಟ ಮಾಡಲು ನಿಂತಿದ್ದ ಕೆ ಎಲ್ 79 4697 ಲಾರಿಯನ್ನು ಕೆಎ 20 ಎಮ್ ಎ 0705 ಇನ್ನೋವಾ ಕಾರು ಕೆಎ 19 ಎಂಸಿ 8642 ಈಕೋ ಕಾರು, ಅಕ್ಕಿಯನ್ನು ತೂಕ ಮಾಡಲು ಉಪಯೋಗಿಸಿದ ಇಲೆಕ್ಟ್ರಾನಿಕ್ ಮೆಷಿನ್-1, ಅಕ್ಕಿ ಚೀಲವನ್ನು ಹೊಲಿಯಲು ಉಪಯೋಗಿಸಿದ್ದ ಯಂತ್ರ-1, ಪಡಿತರ ಅಕ್ಕಿಯನ್ನು ಮಾರಾಟದ ಬಗ್ಗೆ ಲೆಕ್ಕಾಚಾರಕ್ಕೆ ಉಪಯೋಗಿಸಿದ ASUS ಕಂಪೆನಿಯ ಲ್ಯಾಪ್‌ಟಾಪ್-1, 2,57,850/- ರೂಪಾಯಿ ನಗದು ಹಣ ಹಾಗೂ ಎರಡು ಮೋಬೈಲನ್ನು ಸ್ವಾಧೀನ ಪಡಿಸಿಕೊಂಡಿರುವುದಾಗಿದೆ, ಆ ಮೂಲಕ ಆಪಾದಿತರಾದ ನೀವು ಕಲಂ 3, 6, 7 ಅವಶ್ಯಕ ವಸ್ತುಗಳ ಅಧಿನಿಯಮ ಕಾಯಿದೆ 1955 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 09-01-2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 980/2022**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕುಂದಾಪುರ ಪೋಲಿಸ್ ಠಾಣೆ

**- ವಿರುದ್ಧ -**

**ಆರೋಪಿ** ಃ 1. ಅಬ್ದುಲ್ ಸತ್ತಾರ್, ತಂದೆಃ ಹಳವಳ್ಳಿ ಹಸೈನಾರ್ ಬ್ಯಾರಿ.

**1. ನಿಮಗೆ ಓದಿ ಹೇಳಿದ ಆರೋಪಣೆಯು ಅರ್ಥವಾಗಿದೆಯೇ ?**
**ಉ.**

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
**ಉ.**

**ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 980/2022**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕುಂದಾಪುರ ಪೋಲಿಸ್ ಠಾಣೆ

**- ವಿರುದ್ಧ -**

**ಆರೋಪಿ** ಃ 2. ಅಬ್ದುಲ್ ಅಜೀಜ್, ತಂದೆಃ ಹಳವಳ್ಳಿ ಹಸೈನಾರ್ ಬ್ಯಾರಿ.

**2. ನಿಮಗೆ ಓದಿ ಹೇಳಿದ ಆರೋಪಣೆಯು ಅರ್ಥವಾಗಿದೆಯೇ ?**
**ಉ.**

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
**ಉ.**

**ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ.